International Journal of Kannada Research
www.kannadajournal.com

ISSN: 2454–5813
IJSR 2016; 2(3): 110-114
© 2016 IJKS
www.kannadajournal.com
Received: 05-05-2016
Accepted: 12-06-2016

**ಎಸ್.ಬಿ.ಚನ್ನಗೌಡ್ರ**
ಎಂ.ಎ ಕನ್ನಡ ಪ್ರಾಧ್ಯಾಪಕರು
ಹಾಗೂ ಪ್ರಾಂಶುಪಾಲರು
ಬಿ.ಆರ್.ತಂಬಾಕದ ಕಲಾ ವಾಣಿಜ್ಯ
ಮತ್ತು ವಿಜ್ಞಾನ ಪ್ರಥಮ ದರ್ಜೆ
ಮಹಾವಿದ್ಯಾಲಯ ಹಿರೇಕೆರೂರು,
ಕರ್ನಾಟಕ, ಭಾರತ

**Correspondence**
**ಎಸ್.ಬಿ.ಚನ್ನಗೌಡ್ರ**
ಎಂ.ಎ ಕನ್ನಡ ಪ್ರಾಧ್ಯಾಪಕರು
ಹಾಗೂ ಪ್ರಾಂಶುಪಾಲರು
ಬಿ.ಆರ್.ತಂಬಾಕದ ಕಲಾ ವಾಣಿಜ್ಯ
ಮತ್ತು ವಿಜ್ಞಾನ ಪ್ರಥಮ ದರ್ಜೆ
ಮಹಾವಿದ್ಯಾಲಯ ಹಿರೇಕೆರೂರು,
ಕರ್ನಾಟಕ, ಭಾರತ

# ಗುರು ಸಾಕ್ಷಾತ್ ಪರಬ್ರಹ್ಮ

**ಎಸ್.ಬಿ.ಚನ್ನಗೌಡ್ರ**

**ಪೀಠಿಕೆ**

ಅಷ್ಟಾವರಣಗಳಲ್ಲಿ ಪ್ರಥಮವಾದ 'ಗುರು'ವಿನ ಹಿರಿಮೆ ಅಪಾರವಾಗಿದೆ. ಸರ್ವಜ್ಞ ತನ್ನ ಅನೇಕ ವಚನಗಳ ಮೂಲಕ ಗುರುವಿನ ಶ್ರೇಷ್ಠತೆಯನ್ನು ಸಾರಿದ್ದಾನೆ. ಶಿಷ್ಯನ ಅಜ್ಞಾನವನ್ನು ಹೋಗಲಾಡಿಸಿ ಅರಿವನ್ನು ಮೂಡಿಸುವ ಗುರುವಿನ ಮಹಿಮೆಯನ್ನು ಮನಮುಟ್ಟುವಂತೆ ತಿಳಿಸಿದ್ದಾನೆ. ಅಂತಹ ವಚನವೊಂದು ಹೀಗಿದೆ, ಹರಮುನಿದರು ಗುರು ಕಾಯುವನೆಂಬ' ಸೂಕ್ತಿಯಂತೆ ತ್ರಿಗುಣಗಳ ಬಂಧನವನ್ನು ಕಳಚಿ ಮುಕ್ತವಾಗುವ ಕ್ರಮವನ್ನು ತಿಳಿಸುವ ಮಹಾ ಪುರುಷನೇ ಆತ್ಮದತ್ತ ಬೆಳಕನ್ನು ತೋರಿಸುವ ಗುರು ಸಾಮಾನ್ಯ ಮಾನವರ ಬದುಕಿನಲ್ಲಿ ಬೇಕೆ ಬೇಕು. ಗುರುವಿಲ್ಲದೆ ವಿದ್ಯೆ ಅಷ್ಟೇ ಅಲ್ಲ ಏನನ್ನೂ ಪಡೆದುಕೊಳ್ಳಲಾಗದು. ಇಡೀ ಬ್ರಹ್ಮಾಂಡವನ್ನೆ ವ್ಯಾಪಿಸಿರುವ ಗುರುಪದ ಎಲ್ಲ ಕಾರ್ಯಕ್ಕೂ ಸರ್ವಶ್ರೇಷ್ಠ. ಬದುಕಿನ ಬ್ರಹ್ಮಾಂಡದ ಅಂತರಂಗ ಬಹಿರಂಗವನ್ನು ಬೆಳಗಿ ಪರಿಪೂರ್ಣಗೊಳಿಸುವ ಮಹಾಜ್ಯೋತಿ ಗುರು. ಗುರುವಿನ ವಿಸ್ತಾರದ ಪರಿಯನ್ನು ಹೇಳಲು ಅಸಾಧ್ಯ. ಗುರುವಿನ ವಿಶೇಷತೆ ಮಾನವ ಜೀವನದಲ್ಲಿ ವರ್ಣನಾತೀತವಾಗಿದೆ. ಖಗೋಲದಲ್ಲಿ ಗುರುಗ್ರಹ ದೊಡ್ಡದು. ಅದರಂತೆ ಭೂಗೋಲ (ಭೂಮಿ) ದಲ್ಲಿ ಗುರು ದೊಡ್ಡವನು. ಛಂಧಶ್ಯಾಸ್ತ್ರದಲ್ಲಿ 'ಲಘು' ಒಂದು ಮಾತ್ರೆಯ ಕಾಲದ್ದು, 'ಗುರು' ಎರಡು ಮಾತ್ರೆಗಳ ಕಾಲವನ್ನು ಹೊಂದಿರುತ್ತದೆ. ಹಾಗಾಗಿ 'ಲಘು' ಸಣ್ಣದು, 'ಗುರು' ದೊಡ್ಡದು. ಪರಿಪೂರ್ಣನಾದ ಗುರುವಿನಿಂದ ಶಿಷ್ಯನ ಅಜ್ಞಾನಾಂಧಕಾರ ತೊಲಗಿ ಸುಜ್ಞಾನದ ಜ್ಯೋತಿ ಪ್ರಜ್ವಲಿಸುತ್ತದೆ ಎಂದು ಗುರುವಿನ ಹಿರಿಮೆಯನ್ನು ಎತ್ತಿ ಹೇಳುತ್ತಾನೆ.

ಗುರು ಎಂಬುದು ಸಂಸ್ಕೃತ ಪದ. 'ಗು' ಎಂದರೆ ಅಂಧಕಾರ 'ರು' ಎಂದರೆ ನಿವಾರಕ. ಅಂಧಕಾರ ನಿವಾರಕನೇ ಗುರು. ಸಂಸಾರದ ವ್ಯಾಮೋಹದಲ್ಲಿ ಮನವು ಮುಸುಕು ಹಾಕಿಕೊಂಡು, ಕಣ್ಮುಚ್ಚಿ ಹಾಲು ಕುಡಿಯುವ ಕಳ್ಳ ಬೆಕ್ಕಿನಂತೆ, ಪ್ರೇಯ, ಶ್ರೇಯಗಳ ಗಣನೆ ಇಲ್ಲದೆ ವಿವೇಕ ಹೀನವಾಗಿರುತ್ತದೆ. ಇದರಿಂದ ದಾರಿಗಾಣುವುದಿಲ್ಲ, ಹೀಗಾಗಿ ಮಾಯೆಯ ಅಂಧಕಾರದಲ್ಲಿ ಮನ ತಡಕಾಡುತ್ತದೆ. ಇಂಥ ಆವಸ್ಥೆಯಲ್ಲಿ ಭೌತಿಕ, ಅಭೌತಿಕ ಮತ್ತು ಅಧ್ಯಾತ್ಮಿಕ ಎಂಬ ತಾಪತ್ರಯಗಳು ಮನವನ್ನು ಕೊರಗಿಸುತ್ತವೆ. ಮನಸ್ಸಿನ ಸಂಸ್ಕಾರಕ್ಕೆ ಗುರುವಿನ ಅಗತ್ಯೆತೆ ಇದೆ ಎಂಬುದನ್ನು ಸಾರಿ ಹೇಳುತ್ತಾನೆ. ಭಾರತೀಯ ಸಂಸ್ಕೃತಿಯಲ್ಲಿ ಗುರು ತತ್ವಕ್ಕೆ ತುಂಬಾ ಮಹತ್ವವಿದೆ. ಹೀಗಾಗಿಯೆ ಗುರುಪೂರ್ಣಿಮೆಗೆ ಭಾರತೀಯ ಪರಂಪರೆಯಲ್ಲಿ ಉನ್ನತ ಸ್ಥಾನವಿರುವುದು ಸಹಜವೆ. ಮೊದಲಿಗೆ 'ಗುರು' ಎಂದರೆ ಯಾರು? ಗುರುವಿಗೂ ನಮ್ಮ ಜೀವನಕ್ಕೂ ಏನು ಸಂಬಂಧ? ಎಂಬ ಪ್ರಶ್ನೆಗೆ ಉತ್ತರವನ್ನು ಹುಡುಕುತ್ತ ಹೊರಟಾಗ ಯಾರು ನಮ್ಮಲ್ಲಿರುವ ಕತ್ತಲೆಯನ್ನು ಕಳೆದು ಬೆಳಕನ್ನು ನೀಡುತ್ತಾರೆಯೋ ಆತ ಗುರು ಎನ್ನುವುದು ಪರಂಪರೆಯಲ್ಲಿರುವ ಒಕ್ಕಣೆ. 'ಕತ್ತಲೆ' ಎಂದರೆ ಏನು? ಬೆಳಕಿನ ಅಭಾವವೇ ಕತ್ತಲು. ಬೆಳಕು ನಮಗೆ ಎಲ್ಲ ವಸ್ತುವನ್ನು ತೋರಿಸುತ್ತದೆ. ಬೆಳಕು ಇಲ್ಲದಿದ್ದಾಗ ಗಾಡಾಂಧಕಾರವಾಗಿ ಏನೊಂದು ಕಾಣದು. ಸುತ್ತಮುತ್ತಲಿನ ಜಗತ್ತನ್ನು ಮಾತ್ರವಲ್ಲದೆ ನಮ್ಮನ್ನು ನಮಗೆ ಕಾಣಿಸಿಕೊಡುವ ಬೆಳಕೆ ಗುರು. ಬದುಕಿಗೆ ಗುರು ಒದಗಿಸುವ ಬೆಳಕನ್ನೇ 'ವಿದ್ಯೆ' ಎಂದು ಪೂರ್ವಜರು ಕರೆದರು. ಬದುಕನ್ನು ಬೆಳಗುವಂತಹದ್ದೆಲ್ಲವು ವಿದ್ಯೆಯೇ ಹೌದು. ಅಂತಹ ವಿದ್ಯೆಯನ್ನು ನೀಡುವಾತನೆ ನಿಜವಾದ ಗುರು.

ಅಜ್ಞಾನವನ್ನು ಹೋಗಲಾಡಿಸಿ, ಬೆಳಕನ್ನು ದಯಪಾಲಿಸುವವನೆ ಗುರು. ಮನುಷ್ಯನ ಹೃದಯದಲ್ಲಿನ ಅಜ್ಞಾನದ ಕತ್ತಲೆಯನ್ನು ಕಳೆದು ಸುಜ್ಞಾನದ ಜ್ಯೋತಿಯನ್ನು ಬೆಳಗಿಸುವ ಗುರು ಮಾನವನ ಬದುಕಿಗೆ ಅಗತ್ಯ. ಈ ನೆಲೆಯಲ್ಲಿ ಸರ್ವಜ್ಞನ ದೃಷ್ಟಿಯಲ್ಲಿ ಗುರುವಿನ ಅಗತ್ಯತೆಯನ್ನು ಚರ್ಚಿಸಬಹುದು.ಮಾನವನ ಬದುಕಿನಲ್ಲಿ ಗುರುವಿನ ಅಗತ್ಯತೆಯನ್ನು ಬದುಕಿನ ದಾರಿಗೆ ವಿದ್ಯೆ ಎಂಬ ಬೆಳಕನ್ನು ಕೊಡುವವನೇ ಗುರು. ಅಂತಹ ಗುರು ತನ್ನೊಳಗೆ ಹೇಗಿದ್ದಾನೆಂದರೆ, ಮರದೊಳಗೆ ಅಗ್ನಿ ಇರುವಂತೆ ತನ್ನಲ್ಲಿಯೇ

ಗುರುವಿದ್ದಾನೆ ಎಂಬುದನ್ನು ಅರಿಯಬೇಕೆಂದು ತಿಳಿಸುತ್ತಾನೆ. ಗುರುವಿನ ಅಗತ್ಯತೆಯನ್ನು ಹೇಳುವುದರ ಜೊತೆಗೆ ಗುರುವಿನ ವಿಸ್ತಾರವನ್ನು ಹೇಳುತ್ತಾನೆ. ತನ್ನ ಅರಿವೇ ತನಗೆ ಗುರುವಾದಾಗ ಅದನ್ನು ಅರಿಯುವುದು ಮಾನವನ ಲಕ್ಷಣ. ಅರಿವು ತೋರಿದಂತೆ ನಡೆದರೆ ಬದುಕಿನಲ್ಲಿ ಸನ್ಮಾರ್ಗವನ್ನು ಪಡೆಯಬಹುದು.

ಹಿಂದೂ ಧಾರ್ಮಿಕ ಪಂಥಗಳ ಗುರುಗಳಿಗೆ ಸದ್ಗುರುಗಳು ಎಂದು ಉಲ್ಲೇಖಿಸಲಾಗುತ್ತದೆ. ಸದ್ಗುರುವಿನ ಗುಣ ಲಕ್ಷಣಗಳು ಮಾನವನಿಗೆ ಆದರ್ಶ ಪ್ರಾಯವಾಗಿರುತ್ತವೆ. ಭಾರತೀಯ ಸಂಸ್ಕೃತಿಯಲ್ಲಿ ಗುರುವನ್ನು ಉಚ್ಚ ಸ್ಥಾನದಲ್ಲಿಟ್ಟು ಗೌರವಿಸಲಾಗುತ್ತದೆ. ಮನುಷ್ಯನ ವಿಕಸನದಲ್ಲಿ ಗುರುವಿನ ಪಾತ್ರ ಅತೀ ಪ್ರಾಮುಖ್ಯವಾದುದು. ಭಾರತವು ಗುರುತತ್ವದ ದೀಪವನ್ನು ಅತ್ಯಂತ ಜಾಗರೂಕತೆಯಿಂದ ಗೌರವಿಸುತ್ತದೆ. ಸತ್ಯ ಜ್ಞಾನದ ಅನುಭವ ಪಡೆಯಲು ಒಬ್ಬ ವ್ಯಕ್ತಿಗೆ ಗುರು ಅತಿ ಅವಶ್ಯವಾಗಿ ಬೇಕು. ನಿಜವಾದ ಗುರು ವೇದಗಳಲ್ಲಿ ನಿಪುಣನಾಗಿ, ಅಸೂಯೆಯಿಂದ ಮುಕ್ತನಾಗಿ, ಯೋಗವನ್ನು ಬಲ್ಲವನಾಗಿ ಸ್ವಯಂ ಜ್ಞಾನವನ್ನು ಹೊಂದಿದವನೇ ಶ್ರೇಷ್ಠ ಗುರು ಎನಿಸುತ್ತಾನೆ. ಗುರುವಿನ ಅರ್ಹತೆಯನ್ನು ಪ್ರಚುರಪಡಿಸುವ ಮೂಲ ಉದ್ದೇಶ ಕವಿಗಿರುವದನ್ನು ಕಾಣಬಹುದು. ಸರ್ವಜ್ಞ ಗುರುವಿನ ಲಕ್ಷಣವನ್ನು ಹೇಳುವಾಗ ಗುರುವು ಹೀಗೆ ಇರಬೇಕು ಎಂಬುದು ನಿಯಮವಿಲ್ಲ. ಊರಿಂಗೆ ದಾರಿಯನು ಯಾರು ತೋರಿಸಿದರೇನು, ಬದುಕಿನ ನಿಜವಾದ ಮಾರ್ಗವನ್ನು, ಸನ್ಮಾರ್ಗವನ್ನು ತೋರಿಸಿ ಮುಕ್ತಿ ಪಥದೆಡೆಗೆ ಸಾಗಿಸಬಲ್ಲವನೇ ಗುರು. ಗುರುಗಳಲ್ಲಿ ಹಲವಾರು ಶ್ರೇಣಿಗಳನ್ನು ಶಾಸ್ತ್ರಕಾರರು ಮಾಡಿದ್ದಾರೆ. ವೇಮನರು ಮೂರು ಶ್ರೇಣಿಯ ಗುರುಗಳನ್ನು ಗುರುತಿಸುತ್ತಾರೆ.

- ಕಳ್ಳ ಗುರು ಕಟ್ಟುವನು ಎಲ್ಲ ಕರ್ಮಗಳನ್ನು
- ಮಧ್ಯಮನು ಕಟ್ಟುವನು ಮಂತ್ರ ತಂತ್ರಗಳನ್ನು
- ಉತ್ತಮ ಗುರುವು ಯೋಗ್ಯ ಸಾಮ್ರಾಜ್ಯವನ್ನು ಕಟ್ಟುತ್ತಾನೆ.

ಮನಸ್ಸನ್ನು ಬಿಡಿಸಿ ತಿಳಿದು ಮನದ ಕೋರಿಕೆಗಳನ್ನು ಮತ್ತು ಕೋರಿಕೆಗಳ ಹಿಂದಿನ ವಾಸನೆಗಳನ್ನು ಗುರುತಿಸುತ್ತಾನೆ. ವಾಸನೆಗಳೇ ಉದಿಸದಂತೆ ವಿಷಯ, ವಸ್ತುಗಳ ಸಂಗ ತೊರೆಯುವಂತೆ ಮಾಡುತ್ತಾನೆ. ಸಜ್ಜನ ಸಂಗದಲ್ಲಿ ಇರುವಂತೆ, ಶಿಕ್ಷಿಸುವ ಗುರುವನ್ನು ಆಶ್ರಯಿಸಬೇಕು ಎನ್ನುತ್ತಾನೆ. ಸುಳ್ಳು ಹೇಳುವವನು ಗುರುವಲ್ಲ, ಅಲ್ಪಜ್ಞರನ್ನು ಶೋಷಿಸುವವನು ಗುರುವಲ್ಲ, ರ ಠ ಈ ಕ ಕಲಿಸುವವನು ಗುರುವಲ್ಲ, ಅಜ್ಞಾನವನ್ನು ತೊಲಗಿಸುವವನೇ ಗುರು. ಹಾಗೆಯೇ ಗುರುವಿನಲ್ಲಿ ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರುವೆಂದು ಭೇದಗಳಿರುವುದಾಗಿ ತಿಳಿಸುತ್ತಾರೆ. ದೀಕ್ಷೆ ಕೊಡುವವನು ದೀಕ್ಷಾಗುರು, ಮನಸ್ಸಿಗೆ ಅರಿವನ್ನು ಮೂಡಿಸುವವನು ಶಿಕ್ಷಾಗುರು ಮುಕ್ತಿಮಾರ್ಗ ತೋರಿಸುವವನು ಮಹಾಜ್ಞಾನಗುರುವೆಂದು ಕರೆಯುವುದುಂಟು. ಬಸವಣ್ಣ, ಚನ್ನಬಸವಣ್ಣ, ಅಕ್ಕಮಹಾದೇವಿ ಮೊದಲಾದವರ ವಚನಗಳಲ್ಲಿ ಗುರುವಿನ ಮಹತ್ವವನ್ನು ಕಾಣಬಹುದು. ಜೀವನದಲ್ಲಿ ಕಷ್ಟ, ಸುಖ, ನೋವು, ನಲಿವು ಬರುವುದು ಹೋಗುವುದು ಸಾಮಾನ್ಯ. ಇಂಥ ಬಂಧನಗಳು ಆಕಸ್ಮಿಕವಾಗಿ, ಅನಿವಾರ್ಯವಾಗಿ ಬದುಕಿನ ಒಳಗೆ ಪ್ರವೇಶಿಸಿದಾಗ ಅಂತಹ ಬಂಧನದಿಂದ ಬಿಡಿಸಿ ಮುಕ್ತಿಯನ್ನು ಕೊಡಲು ಗುರುವಿನಿಂದ ಮಾತ್ರ ಸಾಧ್ಯ. ಬಂಧುಗಳೆಂಬುವವರು ಬಂದುಂಡು ಹೋಗುವರೇ ವಿನಃ ಬಂಧನವ ಕಳೆಯಲು ಅವರಿಂದಾಗದು.

ಗುರು ಸಾಕ್ಷಾತ್ ಪರಬ್ರಹ್ಮ' ಎನ್ನುವಂತೆ ದೈವಿ ಸ್ವರೂಪಿ ವ್ಯಕ್ತಿತ್ವದ ಗುರುಗಳನ್ನು ಭಾರತೀಯ ಸಂಸ್ಕೃತಿಯಲ್ಲಿ ಕಾಣಬಹುದು. ಭಾರತೀಯ ಸಂಸ್ಕೃತಿಯಲ್ಲಿ ಬೃಹಸ್ಪತಿ ವಾರವನ್ನು 'ಗುರುವಾರ' ವೆಂದು ಕರೆಯಲ್ಪಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿ ಗುರು ಎಂಬ ಶಬ್ದವು ವ್ಯಾಪಕವಾಗಿ 'ಶಿಕ್ಷಕ' ಎಂಬ ಸಾಮಾನ್ಯ ಅರ್ಥದ ಜೊತೆ ಬಳಸಲ್ಪಟ್ಟಿರುತ್ತದೆ. ಉತ್ತಮ ಜ್ಞಾನ ನೈಪುಣ್ಯತೆಯನ್ನು ಹೊಂದಿ ಗುರು ಶ್ರೇಷ್ಠನೆನಿಸಿ ಪರಬ್ರಹ್ಮನೆನಿಸಿದ್ದಾನೆ. ಮುಂದುವರಿದು ಅಧ್ಯಾತ್ಮ ಬೋಧಕನೆನಿಸಿ ದೈವಿ ಸ್ವರೂಪದ ದಾರಿ ತೋರಿಸುವ ಪರಮೇಶ್ವರನೆನಿಸುತ್ತಾನೆ. ಸಮೃದ್ಧ ವ್ಯಕ್ತಿತ್ವದ ಅಥವಾ ಪ್ರಭಾವಿ ವ್ಯಕ್ತಿತ್ವದ ಅಂದರೆ 'ಅಧ್ಯಾತ್ಮಿಕ ಜ್ಞಾನದಿಂದ ಸಮೃದ್ಧನಾಗಿರುವ ಪವಿತ್ರ ಗ್ರಂಥಗಳನ್ನು ಅರಿತುಕೊಳ್ಳುವ, ಜ್ಞಾನ ಸಂಪತ್ತಿನ ಸಮೃದ್ಧತೆ ಇರುವ ಗುರು ಅತಿಶಯವಾದ ಗುಣಗಳನ್ನು ಅನುಗ್ರಹಿಸುವವನೇ ಗುರು ಪರಮೇಶ್ವರನೆನಿಸುತ್ತಾನೆ.

ಗುರುವು ಷಡ್ದರ್ಶನಗಳನ್ನು ಹಾಗೂ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಮೀರಿಸುವ ಗುಣ ಗುರುವಿನಲ್ಲಿದೆ. ಗುರು ಸೃಷ್ಟಿ, ಸ್ಥಿತಿ, ಲಯಕಾರನು ಹೌದಲ್ಲವೇ? ಶಿಕ್ಷಕ ಭೌತಿಕವಾಗಿ ಏನನ್ನೂ ತಯಾರಿಸದಿರಬಹುದು, ಆದರೆ ವಿದ್ಯಾರ್ಥಿಗಳು ಜೀವನದ ಗುರಿ, ಉದ್ದೇಶ, ಸಾಧಿಸುವ ಮಾರ್ಗಗಳನ್ನು ತೋರಿಸುವಾತನೇ ಗುರು. ಅವು ಪಕ್ವವಾಗಿ ಬೆಳೆಯುವಂತೆ ವಿವಿಧ ತತ್ವಗಳನ್ನು ಮತ್ತು ದಾರಿ ತಪ್ಪುವ ವಿದ್ಯಾರ್ಥಿಗಳ ನಡೆ, ನುಡಿಗಳನ್ನು, ಕೆಟ್ಟ ಯೋಚನೆಗಳನ್ನು ನಾಶಮಾಡಿ ಸರಿಯಾದ ಮುಕ್ತಿ ಮಾರ್ಗವನ್ನು ತೋರುವಾತನೇ ಗುರು.

ಭೂಮಂಡಲದಲ್ಲಿ ಎಲ್ಲಾ ಪ್ರಾಣಿಗಳಂತೆ ಮನುಷ್ಯನು ಪ್ರಾಣಿಯೆ. ಆದರೂ ಆತ ಭಿನ್ನ ಎನಿಸಿಕೊಳ್ಳುವುದು ತನ್ನ ಯೋಚನಾ ಶಕ್ತಿಯ ಲಹರಿಯ ಮೂಲಕ. ಆದರೂ ಜನ್ಮ ಜಾತವಾಗಿ ಪ್ರಾಣಿಗಳಿಗೆ ಬರುವಂತಹ ಗುಣಗಳು ಮನುಷ್ಯನಿಗೆ ಬಂದಿರುವುದಿಲ್ಲ. ಹುಲಿಯನ್ನು ಅದರ ಗುಂಪಿನಿಂದ ಬೇರ್ಪಡಿಸಿದರು ಅದು ಬೇಟೆಯಾಡಲು ಕಲಿಯುತ್ತದೆ. ಜಿಂಕೆಯನ್ನು ಎಲ್ಲಿ ಬಿಟ್ಟರೂ ಹಸಿರು ಹುಲ್ಲನ್ನೇ ತಿಂದು ಜೀವಿಸುತ್ತದೆ. ಮರದಿಂದ ಮರಕ್ಕೆ ಹಾರುವ ಗುಣವನ್ನು ಕೋತಿ ತಾನಾಗಿಯೇ ಕಲಿಯುತ್ತದೆ. ಹೀಗೆ ಎಲ್ಲ ಪ್ರಾಣಿಗಳು ವಂಶ ಪಾರಂಪರ್ಯವಾಗಿ ಕೆಲವು ಗುಣಗಳು ತಾವಾಗಿಯೇ ಬರುತ್ತವೆ. ಆದರೆ ಮನುಷ್ಯನಿಗೆ ಎಲ್ಲ ಗುಣಗಳನ್ನು ಬರುವುದು ಹೇಳಿಕೊಟ್ಟರೆ ಮಾತ್ರ ಸಾಧ್ಯ. ಹುಟ್ಟುತ್ತಲೆ ಏನನ್ನು ತಿಳಿಯದ ಮಗು ಕ್ರಮೇಣ ತನ್ನ ಸುತ್ತಮುತ್ತಲಿನ ಭಾಷೆಯನ್ನು ಗಮನಿಸುತ್ತ ಕೆಲವು ಶಬ್ದಗಳನ್ನು ಕಲಿಯುತ್ತದೆ. ನಿಧಾನವಾಗಿ ಮನೆಯ ಸುತ್ತಮುತ್ತಲಿನ ಪರಿಸರದಲ್ಲಿ ಕಂಡುಬರುವ ವಿಭಿನ್ನ, ವಿವಿಧ ಜನರು ವಸ್ತುಗಳಿಂದ ಹಲವಾರು ವಿಷಯಗಳನ್ನು ಕಲಿಯುತ್ತದೆ. ಆದರೆ ಶೈಶವಾವಸ್ಥೆ ಕಳೆದು ಬಾಲ್ಯಕ್ಕೆ ಅಡಿ ಇಟ್ಟಾಗ ಮಕ್ಕಳಿಗೆ ಸಾಮಾಜಿಕ ಜೀವನದ ಪರಿಚಯ ಆಗುತ್ತಾ ಹೋಗುತ್ತದೆ. ಈ ಹಂತದಿಂದ ಮಗುವಿನ ಕಲಿಕೆಯ ರೀತಿ ಮತ್ತು ಅದರ ವೇಗ ಎರಡೂ ಬದಲಾಗುತ್ತಾ ಹೋಗುತ್ತದೆ. ಗುರು ಎಂದರೆ ಕೇವಲ ಶಾಲೆಗಳಲ್ಲಿ ಅಕ್ಷರ ಹೇಳಿಕೊಡುವ ಗುರುಗಳಷ್ಟೇ ಅಲ್ಲ, ಮನೆಯಲ್ಲಿ ತಂದೆ, ತಾಯಿ, ಅಜ್ಜ, ಅಜ್ಜಿ, ಸ್ನೇಹಿತರು ನಮ್ಮೊಡನೆ ಮಾತನಾಡಿಸುವ ಜನರು ಸಮಾಜದಲ್ಲಿರುವ ಎತ್ತರದ ಗಣ್ಯವ್ಯಕ್ತಿಗಳನ್ನು ಸಹ ಗುರುಗಳಾಗಿ ಭಾವಿಸಿದರೆ ಮನುಷ್ಯ ಉನ್ನತ ಮಟ್ಟಕ್ಕೆ ಏರಬಹುದು. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂದು ದಾರ್ಶನಿಕರೊಬ್ಬರು ಹೇಳಿದ್ದಾರೆ. ಆದರೆ ಏನೂ ತಿಳಿಯದ ಒಬ್ಬ ಸಾಮಾನ್ಯ ಮನುಷ್ಯ ಜೀವನದ ಮೌಲ್ಯಗಳು, ಜೀವನದ ಅರ್ಥ, ಗುರಿ ಆ ಗುರಿಯನ್ನು ಸಾಧಿಸಲು ಬೇಕಾಗುವ ಮಾರ್ಗ ಮುಂತಾದವುಗಳನ್ನು ಗುರುವಿನ ಮಾರ್ಗದರ್ಶನವಿಲ್ಲದೆ ತಿಳಿಯಲು ಸಾಧ್ಯವಿಲ್ಲವೆಂಬ ಅಭಿಪ್ರಾಯ ಕಾಣಬಹುದು.

ಲೋಭಿಗಳು, ಕೆಟ್ಟ ಕೆಲಸದಲ್ಲಿ ಅಡಿ ಇಡುವವರು, ಹೆಚ್ಚು ತಿನ್ನುವವರು, ಸ್ತ್ರೀ ಲೋಲಪರು, ಅಸ್ಥಿರರು, ಭೀತರು, ಕಟುವಾಗಿ ನುಡಿಯುವವರು ಇಂತಹವರು ಗುರುಗಳನ್ನು ನಿಂದಿಸುತ್ತಾರೆ. ಅಂತಹವರನ್ನು ಗುರುವಾದವನು ಮಂತ್ರಯೋಗದ ಮಾರ್ಗದಲ್ಲೇ

ಕೊಂಡೊಯ್ಯಬೇಕು. ಅರಿವು ಎಂದರೆ ತಿಳಿವಳಿಕೆ. ಇದು ನಮಗೆ ಹುಟ್ಟಿನಿಂದ ಬರಲು ಸಾಧ್ಯವಿಲ್ಲ. ಇದಕ್ಕೆ ಒಬ್ಬ ಗುರುವಿನ ಅಗತ್ಯವಿದೆ. ಒಂಭತ್ತು ತಿಂಗಳು ಹೊತ್ತು ಹೆತ್ತು ಸಾಕಿದ ತಾಯಿ ಮೊದಲ ಗುರುವಾಗುತ್ತಾಳೆ. ಆ ಎಳೆಕಂದಮ್ಮನಿಗೆ ಹಾಲುಣಿಸುವ ತರಬೇತಿಯಿಂದ ಹಿಡಿದು ತನ್ನ ಜೀವಿತದ ಕೊನೆಯ ವರೆಗೂ ಒಂದಲ್ಲಾ ಒಂದು ರೀತಿಯ ಗಳಿಗೆಗಳ ಸಂದರ್ಭದಲ್ಲಿ ನಿಂತು ಸಲಹಿ ಹರ ಗುರುವನ್ನು ಕರುಣ ಪ್ರಸಾದವನ್ನು ತಾಯಿ ತೋರಿಸುತ್ತಾಳೆ. ಅಂತಹ ಗುರುವನ್ನು ಹರನನ್ನು ಶಿಲೆಯೆಂದು, ಪ್ರಸಾದವನ್ನು ಎಂಜಲೆಂದು ಬಗೆಯುವ ಪಾಪಿಗೆ ನರಕ ತಪ್ಪಲಾರದು. ಗುರುವಿನ ಋಣವನ್ನು ನೂರು ಜನ್ಮ ಹೊತ್ತು ಬಂದರು ತೀರಿಸಲಾಗದು ಅಂತಹ ಗುರುವಿನ ನಿಂದನೆ ಮಾಡುವುದು ಸರಿಯಾದ ಕ್ರಮವಲ್ಲ. ಅಂಥವನು ಪಂಚ ಮಹಾಪಾತಕನೆನಿಸುತ್ತಾನೆ.

ದೇವರ ಭಯವೇ ಧರ್ಮದ ಮೂಲ ಬಯವೆಂಬ ಅರಿವನ್ನು ಜಾಗೃತಗೊಳಿಸುತ್ತದೆ. ಧರ್ಮದ ಹಾದಿಯಲ್ಲಿ ನಡೆಯುವಂತೆ ಪ್ರೇರೇಪಣೆ ನೀಡುತ್ತದೆ. ಆದ್ದರಿಂದ ಗುರುವಿನ ಭಯವಿರಬೇಕೆಂದು ಹೇಳುತ್ತಾನೆ. ಬ್ರಹ್ಮ, ವಿಷ್ಣು, ಮಹೇಶ್ವರರಂತೆ ಗುರುವು ಸಹ ಅಸಾದೃಶ್ಯ ವ್ಯಕ್ತಿತ್ವವನ್ನು ಹೊಂದಿದ ಅಸಮಾನ್ಯ ಪುರುಷ. ಭಯಂಕರವಾದ ಪ್ರವಾಹವು ಬರ ಸಿಡಿಲಿನಂತೆ ಎರಗುವ ಬಿರುಗಾಳಿಯು, ಭಯಂಕರ ಹೆಡೆ ಎಬ್ಬಿಸಿ ನಿಂತ ಘಟಸರ್ಪವು, ಗುರುವಿನ ಆಜ್ಞೆಯನ್ನು ಪಾಲಿಸಿಕೊಂಡು ಬಂದದ್ದುಂಟು. ಗುರುವಿನ ಆಜ್ಞೆಗೆ ಈ ಪ್ರಕೃತಿಯೇ ತಲೆಬಾಗಿ ನಿಂತಿರುವಾಗ ಗುರುವಿನ ಮೇರು ವ್ಯಕ್ತಿತ್ವ ನಮಗರಿವಾಗದೆ ಇರದು. ಅಷ್ಟೇ ಅಲ್ಲ ಕೊರಡನ್ನು ಕಲ್ಪವೃಕ್ಷ ಮಾಡುವ, ಬರಡನ್ನು ಹಯನ ಮಾಡುವ, ಮೂಕ ಪ್ರಾಣಿಗಳು ಮಾತನಾಡುವುದು ಗುರು ಕರುಣೆಯಂದಲ್ಲದೆ ಮತ್ತೇನು. ಇಂತಹ ಪವಾಡ ಸದೃಶ್ಯ ಗುರುವಿನಲ್ಲಿ ಭಯ, ಭಕ್ತಿ ಇರಬೇಕು.

ಮನುಷ್ಯನಿಗೆ ಭಯ ಆವರಿಸಿದಾಗ ಅರಿವು ಜಾಗೃತವಾಗುತ್ತದೆ. ಆ ಅರಿವು ಜಾಗೃತವಾದಾಗ ಸನ್ಮಾರ್ಗ ದರ್ಶನವಾಗುತ್ತದೆ. ಆ ಸನ್ಮಾರ್ಗವೇ ಮುಕ್ತಿ ಪಥದೆಡೆಗೆ ಕೊಂಡೊಯ್ಯುತ್ತದೆ. ಆದ್ದರಿಂದಲೇ ಗುರುವಿಗೆ ಭಯ ಪಟ್ಟರೆ ಹಾನಿಯಲ್ಲ. ಅದು ಅರಿವಿನೆಡೆಗೆ ಕೊಂಡೊಯ್ಯುವ ನೆರವನ್ನು ನೀಡುತ್ತದೆ. ಸರ್ವಜ್ಞ ಗುರುವಿನಲ್ಲಿ ಭಯ ಪಟ್ಟರೂ ಅದು ಸನ್ಮಾರ್ಗವೇ. ಧರ್ಮ ಪರಿಪಾಲನೆಯ ಮೂಲ ಲಕ್ಷಣವಾಗಿದೆ. ಗುರು ಶಿಷ್ಯ ಪರಂಪರೆಯಲ್ಲಿ ಬೋಧನೆ ಪ್ರಧಾನ ಪಾತ್ರವಹಿಸುತ್ತದೆ. ಗುರುವಿನಿಂದ ಪ್ರಸರಣವಾಗುವ ಜ್ಞಾನವನ್ನು ವಿದ್ಯಾರ್ಥಿಗಳು ಗೌರವ ಬದ್ಧತೆ, ಭಕ್ತಿ ಹಾಗೂ ವಿಧೇಯತೆಗಳಿಂದ ಸ್ವೀಕರಿಸಬೇಕು. ಗುರುವಿನ ಬೋಧನೆಯ ಪ್ರಭಾವದಿಂದ ಶಿಷ್ಯನು ಜ್ಞಾನದಲ್ಲಿ ಪ್ರವೀಣನಾಗುತ್ತಾನೆ. ಮಹಾಭಾರತದಲ್ಲಿ ಅರ್ಜುನನಿಗೆ ಕೃಷ್ಣ ಗುರು ಬೋಧೆ ಮಾಡುತ್ತಾನೆ. ಹೀಗೆ ಭಾರತೀಯ ಸಂಪ್ರದಾಯದಲ್ಲಿ ಗುರು ಶಿಷ್ಯ ಸಂಬಂಧವು ಹಲವು ರೀತಿಯಲ್ಲಿ ಕಾಣಿಸಿಕೊಳ್ಳುತ್ತದೆ. ಗುರುವಿನ ಸಮಗ್ರ ವಿಕಾಸದಲ್ಲಿ ಗುರು ಬೋಧೆಯು ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ.

ಗುರುಬೋಧೆಯಿಂದ ಕೊರಡು ಕಲ್ಪವೃಕ್ಷವಾಗಿ ಬರಡು ಹಯನವಾಗುತ್ತದೆ. ಹಾಗೆಯೇ ಮೊಸರನ್ನು ಕಡೆದು ಬೆಣ್ಣೆಯನ್ನು ತೆಗೆದು ಆ ಬೆಣ್ಣೆಯಿಂದ ತುಪ್ಪವನ್ನು ತೆಗೆಯುವಂತೆ ಒಪ್ಪುಳ್ಳ ಗುರುವಿನ ಉಪದೇಶದಿಂದ ಮುಕ್ತಿಸಿಗುವುದು ಖಚಿತ. ಅಂತಹ ಮುಕ್ತಿಯಿಂದ ವಂಚಿತನಾದರೆ ಹಾನಿಯಲ್ಲದೆ ಮತ್ತಿನ್ನೇನು. ಗುರು ಉಪದೇಶವೆಂಬುದು ಅಮೃತ ಕಳಶದಂತೆ, ಹಾಲಿನಿಂದ ತುಪ್ಪವನ್ನು ತೆಗೆದ ಮೇಲೆ ಹೆಪ್ಪನ್ನು ಹಾಕಲು ಸಾದ್ಯವೇ? ಹಾಗೆಯೆ ಗುರುವಿನಿಂದ ನಿಷ್ಪನ್ನವಾದ ಉಪದೇಶದಿಂದ ಮುಕ್ತಿ ತಪ್ಪದು. ಸಾಣೆಕಲ್ಲಿನ ಮೇಲೆ ಗಂಧದ ಕೊರಡನ್ನು ತೇಯ್ದರೆ ಸುಗಂಧವು ಹೊರಡುವಂತೆ ಜಾಣ ಸದ್ಗುರುವಿನ ಉಪದೇಶದ ಒಂದೊಂದು ನುಡಿಗಳಿಂದ ಮುಕ್ತಿಮಾರ್ಗ ಕಾಣಿಸುತ್ತದೆ.

ಗುರುವಿನ ಸಂಗ ಸನ್ಮಾರ್ಗದೆಡೆಗೆ ಕೊಂಡೊಯ್ಯುತ್ತದೆ. ಮನುಷ್ಯ ಹುಟ್ಟಿನಿಂದ ಸಾಯುವವರೆಗೂ ಏನನ್ನಾದರು ಕಲಿಯುತ್ತಲೆ ಇರುತ್ತಾನೆ ಅದಕ್ಕೆ ಕೊನೆ ಎಂಬುದೇ ಇಲ್ಲ. ಇಲ್ಲಿ ಯಾರು ಗುರು, ಯಾರು ಶಿಷ್ಯ ಎನ್ನುವುದಕ್ಕಿಂತ ಆಯಾ ಸಂದರ್ಭದಲ್ಲಿ ಕಲಿಯುವ ವಿಷಯಕ್ಕೆ ಸಂಬಂಧ ಪಟ್ಟಂತೆ ಗುರು, ಶಿಷ್ಯರ ಸಮಾಗಮ ಜೀವನದ ಪ್ರತಿಕ್ಷಣ ನಡೆಯುತ್ತಲೇ ಇರುತ್ತದೆ ಅಲ್ಲವೇ? ಕಲಿತಷ್ಟು ಮುಗಿಯುವುದಿಲ್ಲ ಕಲಿಕೆಗೆ ಕಾರಣರಾದ ಪ್ರತಿಯೊಬ್ಬರೂ ಗುರುವಿನ ಸ್ಥಾನಕ್ಕೆ ಅರ್ಹರಾಗುತ್ತಾರೆ. ಜಗತ್ತೇ ಒಂದು ಪಾಠಶಾಲೆ ಇಲ್ಲಿ ಪ್ರತಿಯೊಬ್ಬರು ಗುರುಗಳು, ಪ್ರತಿಯೊಬ್ಬರು ವಿದ್ಯಾರ್ಥಿಗಳು. ಇಲ್ಲಿ ಯಾವುದೇ ವಯಸ್ಸಿನ ತಾರತಮ್ಯತೆ ಇಲ್ಲ, ಜಾತಿ ಮತ ಭೇದಗಳಿಲ್ಲ ಕಲಿಕೆಗೆ ಎಲ್ಲರೂ ಒಂದೆ.

ನಿಜವಾದ ಗುರು ವೇದಗಳನ್ನು ಅರಿತುಕೊಂಡಿರುತ್ತಾರೆ, ಅಸೂಯೆಯಿಂದ ಮುಕ್ತನಾಗಿರುತ್ತಾನೆ, ಯೋಗವನ್ನು ಬಲ್ಲವನಾಗಿರುತ್ತಾನೆ. ಯೋಗದ ಸ್ವಭಾವವನ್ನು ನಿರಂತರವಾಗಿ ಹೊಂದಿರುತ್ತಾನೆ. ಇಂತಹ ಭಾವದಿಂದ ಸ್ವಯಂ ಜ್ಞಾನವನ್ನು ಹೊಂದಿದ್ದರೆ, ಯೋಗ್ಯ ಗುರುವೆಂದು ಕರೆಯುತ್ತಾನೆ. ಶಿಷ್ಯನಿಗೆ ಕೆಲವೊಂದು ಗುಣ ಧರ್ಮಗಳು ಅನಿವಾರ್ಯ ಅಗತ್ಯ. ಪರಿಶುದ್ಧತೆ, ಜ್ಞಾನ, ಜಿಜ್ಞಾಸೆ ಮತ್ತು ಕಷ್ಟ ಸಹಿಷ್ಣುತೆಗಳು ತೀರಾ ಅಗತ್ಯ. ಮನಸ್ಸಿನಲ್ಲಿ, ಮಾತಿನಲ್ಲಿ, ಮಾಳ್ಕೆಯಲ್ಲಿ ಪೂರ್ಣ ಪರಿಶುದ್ಧಿ ಬೇಕೆ ಬೇಕು. ದೇಹ ಮತ್ತು ಆತ್ಮಗಳಲ್ಲಿಯ ಆಸೆ, ಬಯಕೆ, ಕ್ರೋಧಾದಿಗಳು ಅಳಿಯಬೇಕು. ಹೆಣ್ಣು, ಹೊನ್ನು, ಮಣ್ಣುಗಳ ಆಸೆಯು ಹಿಂಗಬೇಕು. ಯೋಗ್ಯ ಶಿಷ್ಯನಾಗುವನು ಕಷ್ಟ ಸಹಿಷ್ಣುವಾಗಿರಬೇಕು. ಗುರು ಸೇವೆಯಲ್ಲಿ ಸದಾ ನಿರತನಾದರೆ ಸಕಲ ಪಾಪಗಳಿಂದ ಮುಕ್ತನಾಗುತ್ತಾನೆಂಬ ಲೋಕಮಾನ್ಯ ಸಂದೇಶವನ್ನು ಗುರು ನೀಡುತ್ತಾನೆ.

ಗಟ್ಟಿ ಕಲ್ಲಾದ ಭೂಮಿಯಲಿ ಬೀಜವು ಹುಟ್ಟಿ ಬೆಳೆದಿಹುದೆ? ಹಸನಾದ ಭೂಮಿಯಲ್ಲಿ ಹರಿಕರುಕಾದ ಬೀಜವನ್ನು ಬಿತ್ತಿದರೆ ಆ ಬೀಜ ಮೊಳಕೆಯೊಡೆದು ಚಿಗುರಲು ಸಾಧ್ಯವೇ? ಮನಸ್ಸಿನ ಆಸೆಗಳನ್ನು ತೊರೆಯದೆ ಗುರುಭಕ್ತಿ ಇಲ್ಲದೆ, ಗುರುವಿಗಾಗಿ ಬಹಿರಂಗದಲ್ಲಿ ಭಕ್ತಿ ಇಟ್ಟುಕೊಂಡು ಕಾರ್ಯ ಸಾಧಿಸಿಕೊಳ್ಳುವಂತಹ ಅಯೋಗ್ಯ ಶಿಷ್ಯರನ್ನು ಕಾಣಬಹುದು ಜಾತಿ ಭೇದದಿಂದ ವಿಂಗಡಿಸಿಕೊಂಡು ನಮ್ಮ ಜಾತಿಯವನಲ್ಲ ಎಂಬ ಅಹಂಭಾವದಿಂದ ಗುರುಗಳನ್ನು ಜಾತಿ ವರ್ಗದಿಂದ ಕಾಣುವ ಅಯೋಗ್ಯ ಶಿಷ್ಯರು ಮೌಢ್ಯರೆನಿಸುತ್ತಾರೆ. ಈ ನೆಲೆಯಲ್ಲಿ ಅಯೋಗ್ಯ ಶಿಷ್ಯನಿಂದಾಗುವ ಹಾನಿಯನ್ನು ಶ್ರೇಷ್ಠ ಗುರುವರ್ಗಕ್ಕು ಅಪಕೀರ್ತಿ ಬರುತ್ತದೆ. ಫಲವತ್ತಾದ ಭೂಮಿ ಇದ್ದರೂ ಬೀಜ ಮೊಳಕೆಯಾಗದೆ ಇರಲು ಕಾರಣ ಬೀಜದಲ್ಲಿ ಯಾವುದೇ ಸತ್ವ ಇಲ್ಲದಿರುವುದು. ಅಂತಹ ಫಲವತ್ತಾದ ಭೂಮಿಯಲ್ಲಿಯೇ ಬೀಜ ಹುಟ್ಟದಿರುವಾಗ ಕಲ್ಲಾದ ಭೂಮಿಯಲ್ಲಿ ಬೀಜ ಹುಟ್ಟಿ ಬೆಳೆಯಬಹುದೇ?

ಗುರುವಿಗೆ ಶಿಷ್ಯನು ಗೌರವ ಸಲ್ಲಿಸುವುದು ಎಂದರೆ ಗುರುವಿನ ಮೂರ್ತರೂಪಕ್ಕೆ ಸಲ್ಲುವ ಗೌರವವಲ್ಲ, ವಿದ್ಯಾರ್ಥಿಯು ಶಿಕ್ಷಣದಿಂದ ಪಡೆದುಕೊಂಡಿರುವ ವ್ಯಕ್ತಿತ್ವಕ್ಕೆ ಅದೊಂದು ಸಂಕೇತ, ವಿನಯವೇ ಶಿಕ್ಷಣದ ದಿಟವಾದ ಫಲ. ಸರ್ವಜ್ಞ ಹೇಳಿರುವ ಅಯೋಗ್ಯ ಗುರು–ಶಿಷ್ಯ ಪರಂಪರೆಯಲ್ಲಿ, ಹೇಳುವ ಗುರು, ಕೇಳುವ ಶಿಷ್ಯ, ಹೇಳಲು ಕೇಳಲು ಅರಿಯದ ಗುರು ಶಿಷ್ಯರು ಅದೆಂತಹ ಮೇಳ? ಹೇಳಬಲ್ಲ ಗುರು, ಕೇಳಬಲ್ಲ ಶಿಷ್ಯ ತಮ್ಮ ಅರಿವನ್ನು ಜಾಗೃತಗೊಳಿಸಿಕೊಂಡಾಗಲೇ ಇಬ್ಬರಲ್ಲಿ ಸಂವಾದ ಏರ್ಪಡಬಹುದು. 'ಅರಿವನರಿಯದ ಗುರುವು ಪರವನರಿಯದ ಶಿಷ್ಯ' ಕುರುಡನು ದಾರಿಕಾಣದೆ ತಿರುಗಾಡಿದಂತೆ.

ಗುರು ಶಿಷ್ಯ ಪರಂಪರೆಗೆ ಭಾರತೀಯ ಸಂಸ್ಕೃತಿಯಲ್ಲಿ ಮಹತ್ತರವಾದ ಸ್ಥಾನವಿದೆ. ಗುರುವಿನಿಂದಲೇ ಮುಕ್ತಿ ಪಡೆದು ಮಹತ್ ಕಾರ್ಯ ಸಾಧಿಸಿದ ಸಾದು ಸಂತರ ನಾಡು ನಮ್ಮದು. ಗುರು ಶಿಷ್ಯ ಪರಂಪರೆಯಲ್ಲಿ ಅಯೋಗ್ಯ ಗುರು, ಅಯೋಗ್ಯ ಶಿಷ್ಯ ಮೇಳೈಸಿದಾಗ ಕಲಿಯುವ ಹಾಗೂ ಕಲಿಸುವ ವಿದ್ಯೆ ಮನನವಾಗದೆ ಗುರು-ಶಿಷ್ಯ ಎಂಬ ಸಂಬಂಧವು ಗಾಢವಾಗಿ ನಿಲ್ಲದೆ ದುರ್ವ್ಯವಸ್ಥೆಗೆ ಈಡಾಗುತ್ತದೆ. ಗುರು ಶಿಷ್ಯರ ಸಂಬಂಧವೂ, ವಿದ್ಯೆ ಮತ್ತು ಜೀವನದ ನಂಟು ಪ್ರಾಚೀನ ಕಾಲದ ನಂಬಿಕೆಗಳಿಗಿಂತಲೂ ಭಿನ್ನವಾಗಿದೆ. ಗುರು ಶಿಷ್ಯ ಪರಂಪರೆಯ ಶಿಕ್ಷಣದ ಲಕ್ಷಣವೇ ಬದಲಾಗಿದೆ, ಉದ್ದೇಶಗಳು ಬದಲಾಗಿವೆ.

> 'ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದರೆ-ಆಗಲಿ ಮಹಾಪ್ರಸಾದವೆಂದೆನಯ್ಯ !
> ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದರೆ-ಆಗಲಿ ಮಹಾಪ್ರಸಾದವೆಂದೆನಯ್ಯ !
> ದ್ವಾಪರಯುಗದಲ್ಲಿ ಶ್ರೀಗುರು ಶಿಷ್ಯಂಗೆ ಝಂಕಿಸಿ ಬುದ್ಧಿಯ ಕಲಿಸಿದರೆ-ಆಗಲಿ ಮಹಾಪ್ರಸಾದವೆಂದೆನಯ್ಯ !
> ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದರೆ-ಆಗಲಿ ಮಹಾಪ್ರಸಾದವೆಂದೆನಯ್ಯ !
> ಗುಹೇಶ್ವರ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾ ಬೆರಗಾದೆನು.'

ಗುರು ದರುಶನವೇ ನನಗೆ ಪರುಷವಾಯಿತ್ತು. ಆ ಪರುಷವಿಡಿದು ಮನವು ಲಿಂಗದಲ್ಲಿ ಬೆರೆಸಿ ಕನಸು ಕಳವಳಿಕೆ ಹೆಸರುಗೆಟ್ಟು ಹೋದುವಯ್ಯ. ಪರಬ್ರಹ್ಮ ಸ್ವರೂಪನಾದ ಗುರುವಿನಿಂದಲೇ ಮುಕ್ತಿ ಪಡೆಯಬೇಕು.ಗುರುವಿಗಾಗಿ ಅಲೆದಾಡಬೇಕಿಲ್ಲ. ಸಚ್ಛಿಷ್ಯನನ್ನು ಹುಡುಕಿಕೊಂಡು ಸದ್ಗುರುವು ಬಂದೇ ಬರುವನು. ಕುರಿ ಮರಿಯು ತಾಯಿಯನ್ನು ಕಂಡುಕೊಳ್ಳುವಂತೆ ಶಿಷ್ಯನು ಗುರುವನ್ನು ಗುರುತಿಸುತ್ತಾನೆ. ತಿಳಿದ ಜನರು ತಿಳಿಯದವರಿಗೆ ಮಾರ್ಗ ತೋರುತ್ತಾರೆ. ನಿಜವು ತಿಳಿದ ಬಳಿಕ ನಿಜವನಾಡಬಹುದು. ಸುಜನರು ಆ ನಿಜವನೇ ಹೇಳುತಿಹರು. ಈ ಸತ್ಯವನ್ನು ಎಷ್ಟು ಸಾರಿ ಹೇಳಿದರು ಸರಿಯೇ. ಸತ್ಯ ನುಡಿಯಲು ವಯಸ್ಸಿನ ನಿರ್ಬಂಧವಿಲ್ಲ. ದೀಪವನ್ನು ಬಾಲಕ ಹಿಡಿದರು ಬೆಳಕು ಕೊಡುತ್ತದೆ, ಮುಪ್ಪಿನವರು ಹಿಡಿದರೂ ಬೆಳಕು ಕೊಡುತ್ತದೆ.

ಪರುಷವನ್ನು ಮುಟ್ಟಿದ ಲೋಹವು ಬಂಗಾರವಾಗುವಂತೆ ಗುರುದರುಶನವಾದ ಶಿಷ್ಯನಿಗೆ ಮೋಕ್ಷ ಸದ್ಗತಿ ಒಲಿಯುವುದು ಸಾಧ್ಯ. ಗುರುವಿನ ಪಾದಕೆರಗಿದರೆ ಶಿರ ಮಣಿದು ಗುರುವಿನ ಅಭಯ ಹಸ್ತದಿಂದ ಶಿಷ್ಯನಿಗೆ ಸ್ವರ್ಗ ಪ್ರಾಪ್ತಿಯಾಗುತ್ತದೆ. 'ಕೈಲಾಸ ನೆರಮನೆಯು ಅಕ್ಕು ಸರ್ವಜ್ಞ' ಸದ್ಗುರುವಿನ ದರುಶನ ಪಡೆದರೆ ಶಿಷ್ಯನಿಗೆ ಕೈಲಾಸವೇ ತನ್ನ ನೆರಮನೆಯಾಗುತ್ತದೆ. ಅಂತಹ ಸದ್ಗುರುವಿನ ಮುಕ್ತಿಯನ್ನು ಪಡೆದರೆ ಜೀವನ ಸಾರ್ಥಕವೆಂಬ ಅರಿವು ಮನಗಾಣುತ್ತದೆ.

ಹರಮುನಿದರೆ ಗುರು ಕಾಯುವನು ಎಂಬಂತೆ ಬದುಕಿನಲ್ಲಿ ಸನ್ಮಾರ್ಗ ದರ್ಶನ ಪಡೆಯಲು ಗುರುವಿನ ಮೊರೆ ಹೋಗಲೇಬೇಕು. ಏನನ್ನು ಬೇಡಿದರು ಗುರುವನ್ನೇ ಬೇಡಬೇಕು ಎಂಬ ಹಿನ್ನೆಲೆಯಲ್ಲಿ ಸ್ವಂತ ಜೀವನದಲ್ಲಿ ಗುರು ದರ್ಶನ ಅವನಿಗೆ ಆಗದೇ ಇದ್ದರು ಮಾನವನ ಬದುಕಿಗೆ ಗುರು ಅತಿ ಅವಶ್ಯ. ಲೌಕಿಕ, ಅಧ್ಯಾತ್ಮಿಕ ಜೀವನದಲ್ಲಿ ಏನನ್ನಾದರು ಸಾಧಿಸಲು ನಾವು ಗುರುವನ್ನೇ ಬೇಡಬೇಕು. ಅಂಗ ಸುಖವನ್ನು ಮೆಚ್ಚಿ ಲಿಂಗ ಭಕ್ತಿಯನ್ನು ಮರೆತರೆ ಭವದಲ್ಲಿ ಭಂಗ ಉಂಟಾಗುತ್ತದೆ. ಭವದಿಂದ ದೂರವಿರಬೇಕಾದರೆ ಗುರುರಾಯನ ಕೃಪೆ ಬೇಕಾಗುತ್ತದೆ. ಆಗ ಸಂಸಾರವೆಂಬ ಭವ ಹಿಂಗುತ್ತದೆ. ಹಿಂದಿನ ಜನ್ಮದಲ್ಲಿ ಮಾಡಿದ ಪಾಪ ಕರ್ಮಗಳು ಹಿಂಗಬೇಕಾದರೆ ಗುರುವಿನ ಅಡಿಗೆ ಎರಗಿದರೆ ಭವ ಬಂಧನದಿಂದ ಗುರು ಮುಕ್ತಿ ತೋರಿಸಬಲ್ಲ. ಮುಕ್ತಿಗಾಗಿ ಗುರು ಕರುಣೆ ಅತೀ ಅಗತ್ಯ ಅನೇಕ ತಪ್ಪು ಮಾಡಿದರೂ ಕ್ಷಮಿಸಬಲ್ಲ ಶಕ್ತಿ ಇದೆ ಎಂದಾದರೆ ಅದು ಗುರುವಿಗೆ ಮಾತ್ರ ಇದೆ.

ಮಹಾಗುರುವಿನ ಕೃಪೆಯಾದ ಬಳಿಕ ಮತ್ತೆ ಪ್ರಯೋಜನವಿಲ್ಲ. ಪಾಪ ಕರ್ಮಗಳೆಲ್ಲ ತೊಲಗಿ ಜೀವನ ಪಾವನವಾಗುತ್ತದೆ. ಪಾಪ ಕಾರ್ಯಗಳನ್ನು ಮಾಡಿದ ದೇಹ ತಾಪದಿಂದ ಬಳಲುತ್ತಿರುವಾಗ ಆ ಕೂಪದಿಂದ ಮೇಲೆತ್ತುವವನು ಗುರುರಾಯ. ಹೀಗೆ ಭವ ಸಾಗರದಲ್ಲಿ ಅರಿತು ಅರಿಯದೇ ಮಾಡಿದ ತಪ್ಪುಗಳಿಗಾಗಿ ಗುರುವನ್ನು ಬೇಡುವುದರಿಂದ ಮುಕ್ತಿ ದೊರೆಯುತ್ತದೆ. ತಿಳಿದು ಮಾಡಿದ ತಪ್ಪಿನಿಂದ ಅಥವಾ ತಿಳಿಯದೇ ಮಾಡಿದ ತಪ್ಪಿನಿಂದ ಪಾಪ ಪರಿಹಾರವಾಗಬೇಕೆಂದರೆ ಗುರುವಿನ ಸಂಗ ಸುಖ ಅತ್ಯಗತ್ಯ. ಮಾಡಿದ ಪಾಪಕರ್ಮಗಳ ಪರಿಹಾರಕ್ಕಾಗಿ ಗುರುಭಕ್ತಿ ಜಾಗೃತಗೊಳ್ಳಬೇಕು. ಗುರುವನ್ನು ಹೊಂದಿಲ್ಲದ ವ್ಯಕ್ತಿ ಅನಾಥನೆನಿಸುತ್ತಾನೆ. ಆದ್ದರಿಂದ ಗುರು ದೀಕ್ಷೆಯು ವಿಧಿಯನ್ನು ಮೀರಿಸುವಂತಹದ್ದು ಗುರುವಿನ ಕೃಪೆಯಿಂದ ಮಾಡಿದ ಪಾಪ ಪರಿಹಾರವಾಗಿ ಅಧ್ಯಾತ್ಮಿಕ ಜಾಗೃತೆ ನೆಲೆಗೊಳ್ಳುತ್ತದೆ. ಆ ದೀಕ್ಷೆಯ ಮೂಲಕ ಮನುಷ್ಯ ನಿರಂತರ ಪ್ರಗತಿಯನ್ನು ಹೊಂದುತ್ತಾನೆಂಬಂದು ಲೇಖನದ ಆಶಯವಾಗಿದೆ.

ಮಾನವ ಬದುಕಿನಲ್ಲಿ ಮಾಡಿದ ಪಾಪ ಕರ್ಮಗಳ ಪರಿಹಾರಕ್ಕಾಗಿ ಗುರುವಿನ ಮೊರೆಹೋಗಬೇಕು. ಗುರುವಿನ ಉಪದೇಶದಿಂದ ಅಂಟಿದ ಪಾಪಗಳೆಲ್ಲವೂ ಹರಿದು ಹೋಗುತ್ತವೆ. ವಜ್ರದಿಂದ ಪರ್ವತವನ್ನು ಸೀಳುವಂತೆ ಗುರು ಬಲವಿದ್ದರೆ ಎನನ್ನಾದರೂ ಸಾಧಿಸಬಹುದು ಗುರುವಿಗಿಂತ ಮಿಗಿಲಾದ ಯಾವ ದೈವಗಳು, ಯಾವ ಬಂಧುಗಳು, ಯಾವ ಪುಣ್ಯವೂ ಇಲ್ಲವೆಂಬುದನ್ನು ಅರಿತವನಾಗಿದ್ದಾನೆ. ಜಗಕೆಲ್ಲ ಗುರುವಿನಿಂದಲೇ ಮುಕ್ತಿ ಪ್ರಾಪ್ತಿ ಎಂಬುದು ಆತನ ವೈಚಾರಿಕ ನಿಲುವಾಗಿರುವುದನ್ನು ಗಮನಿಸಬಹುದು. ಗುರುವಿಗೆ ಸರ್ವಾರ್ಪಣ ಮಾಡಿದ ಭಕ್ತ ತನ್ನತನವನ್ನು ಕಳೆದುಕೊಂಡು ಗುರುಲಿಂಗದಲ್ಲಿ ಒಂದಾಗುತ್ತಾನೆ. ಭಕ್ತನೆಂಬ ಮೊದಲರೂಪವು ಉಳಿಯದು. ಶಿವಲಿಂಗದಲ್ಲಿ ಐಕ್ಯವಾದಾಗ ಅಂಗಕ್ಕೆ ಬೇರೆ ರೂಪವಿಲ್ಲ. ಅದಕ್ಕೆ ಸಂಸಾರದ ಸಂಬಂಧವಾವುದು ಉಳಿಯುವುದಿಲ್ಲ. ಸಂಸಾರವು ಕರ್ಪುರದ ಬೆಟ್ಟವಿದ್ದಂತೆ, ಗುರುಸಂಪರ್ಕವು ಜ್ಯೋತಿಸ್ಪರ್ಶದಂತೆ. ಜ್ಯೋತಿಸ್ಪರ್ಶವಾದರೆ ಕರ್ಪುರದ ಬೆಟ್ಟವೂ ಉರಿದು ಹೋಗುತ್ತದೆ. ಅಲ್ಲಿ ಬೂದಿಯೂ ಉಳಿಯದು. ಗುರುವಿಗೆರಗಿದಾಗ ಗುರುಲಿಂಗ ಸಂಪರ್ಕ ಬಂದಾಗ ಜ್ಯೋತಿರ್ಲಿಂಗ ಸ್ಪರ್ಶವಾದಾಗ ಭಕ್ತನ ಸಂಸಾರವು ಶೇಷಮಾತ್ರವೂ ಉಳಿಯದು. ದಿವ್ಯ ತತ್ವವನ್ನು ತಿಳಿಸಲು ಈ ಮೂರು ಸಾಲಿನ ವಚನದಲ್ಲಿ ಸರ್ವಜ್ಞ ಗುರುವಿನ ಅಪಾರ ಮಹಿಮೆಯನ್ನು ಎತ್ತಿ ಹೇಳಿರುವುದನ್ನು ಕಾಣಬಹುದು.

ಆದ್ದರಿಂದ ಗುರುವನ್ನು ಮೊರೆಹೊಕ್ಕು ಪಾಪ ಕರ್ಮಗಳಿಂದ ಮುಕ್ತಿಹೊಂದಬೇಕೆಂದು ಮಾರ್ಗದರ್ಶನ ಮಾಡುತ್ತಾನೆ. ಮಾಡಿದ ಪಾಪ ಕರ್ಮಗಳನ್ನು ಕಳೆಯುವ ಶಕ್ತಿ ಗುರುವಿಗಿದೆ ಎಂದಾದರೆ, ಅಂತಹ ಸದ್ಗುರುವಿನ ಸನ್ಮಾರ್ಗ ದರ್ಶನ ಬದುಕಿನಲ್ಲಿ ಬೇಕಾಗುತ್ತದೆ. ಗುರುವಿನ ಹಸ್ತಮಸ್ತಕ ಸಂಯೋಗದಿಂದ ಶಿಷ್ಯನು ಬ್ರಹ್ಮರಂಧ್ರದಲ್ಲಿರುವ ಚಿತ್ಕಳೆಯನ್ನು ಗ್ರಹಿಸಿ ಸ್ಥೂಲಶರೀರದಲ್ಲಿ ಇಷ್ಟಲಿಂಗ, ಸೂಕ್ಷ್ಮಶರೀರದಲ್ಲಿ ಪ್ರಾಣಲಿಂಗ ಮತ್ತು ಕಾರಣ ಶರೀರದಲ್ಲಿ ಭಾವಲಿಂಗಗಳನ್ನು ಸ್ಥಾಪಿಸಿ ಸನ್ಮಾರ್ಗದೆಡೆಗೆ ಕೊಂಡೊಯ್ಯುತ್ತದೆ.

**ಆಕರ ಗ್ರಂಥಗಳು**

1. ಜಿ.ಎಸ್.ಶಿವರುದ್ರಪ್ಪ: ಸಮಗ್ರ ಗದ್ಯ.

2. ದೇಜಗೌ: ಸರ್ವಜ್ಞ ಒಂದು ಅಧ್ಯಯನ.
3. ದ.ರಾ.ಬೇಂದ್ರೆ: ಸಾಹಿತ್ಯ ಸಂಶೋಧನೆ.
4. ವಿ.ಸೀತಾರಾಮಯ್ಯ: ಸತ್ಯ ಮತ್ತು ಮೌಲ್ಯ.
5. ಆರ್.ಸಿ.ಹಿರೇಮಠ (ಲೇ) ವಚನ ಸಾಹಿತ್ಯ ಹಾಗೂ ಸರ್ವಜ್ಞ: ಸರ್ವಜ್ಞ ಕವಿ: ಜೀವನ ಹಾಗು ಕಾವ್ಯ.
6. ಕಾವ್ಯಾನುಭವ:
7. ಪಂಪ ಭಾರತ:
8. ಎಲ್.ಅರ್.ಹೆಗಡೆ (ಲೇ) ಸರ್ವಜ್ಞ ಸಮಾಜ ವಿಮರ್ಶೆ: ಸರ್ವಜ್ಞ ಕವಿ: ಜೀವನ ಹಾಗು ಕಾವ್ಯ.
9. ಎಂ.ಅಕಬರ ಅಲಿ: ಸರ್ವಜ್ಞನ ಸಮಾಜ ದರ್ಶನ ಹಾಗೂ ಸಾಹಿತ್ಯ ತತ್ವ.